# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ ಮಹದಾಯಿ ಜಲ ವಿವಾದ - ಉಪ ತಾಂತ್ರಿಕ ಸಲಹೆಗಾರರುಗಳ ಸೇವೆಯನ್ನು ಪಡೆಯುವ ಬಗ್ಗೆ.

***

ಓದಲಾಗಿದೆ: 1) ಸರ್ಕಾರದ ಆದೇಶ ಸಂ: ಜಸಂಇ 10 ಮವಿಇ 2018 ದಿನಾಂಕ:21.03.2018.
2) ಸರ್ಕಾರದ ಆದೇಶ ಸಂ: ಜಸಂಇ 10 ಮವಿಇ 2018 ದಿನಾಂಕ:27.07.2018
3) ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಇವರ ಪತ್ರ ಸಂ: ಜಸಅ/ಕೃಗೋಘ/ಸಿ1/1124/2017-18/700 ದಿನಾಂಕ:17.10.2018.

ಪ್ರಸ್ತಾವನೆ :

ಮಹದಾಯಿ ಜಲ ವಿವಾದ ವಿಷಯದಲ್ಲಿ ಬೆಂಗಳೂರು ಹಾಗೂ ನವದೆಹಲಿಯಲ್ಲಿ ಕಾನೂನು/ತಾಂತ್ರಿಕ ತಂಡವು ನಡೆಸುವ ಚರ್ಚಾ ಸಭೆಗಳಲ್ಲಿ ಭಾಗವಹಿಸಿ ಅಗತ್ಯ ನೆರವು ನೀಡಲು ಹಾಗೂ ಮಹದಾಯಿ ಜಲ ವಿವಾದಕ್ಕೆ ಸಂಬಂಧಿಸಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವ ಸಲುವಾಗಿ ದಿನಾಂಕ:09.01.2018ರಿಂದ ಪೂರ್ವಾನ್ವಯವಾಗುವಂತೆ ನ್ಯಾಯಾಧಿಕರಣದ ಕಲಾಪಗಳು ಪೂರ್ಣಗೊಳ್ಳುವವರೆಗೆ ಶ್ರೀ ಎಸ್.ಲಕ್ಷ್ಮೀನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರ ಸೇವೆಯನ್ನು ಉಪ ತಾಂತ್ರಿಕ ಸಲಹೆಗಾರರನ್ನಾಗಿ ಪಡೆಯಲು ಮೇಲೆ ಓದಲಾದ ಕ್ರಮಸಂಖ್ಯೆ (1) ಮತ್ತು (2)ರ ಸರ್ಕಾರದ ಆದೇಶಗಳಲ್ಲಿ ಅನುಮೋದನೆ ನೀಡಲಾಗಿತ್ತು.

2. ಮಹದಾಯಿ ಹಾಗೂ ಇತರೆ ಅಂತರ ರಾಜ್ಯ ಜಲ ವಿವಾದಗಳಿಗೆ ಸಂಬಂಧಿಸಿದಂತೆ, ಉಪ ತಾಂತ್ರಿಕ ಸಲಹೆಗಾರರಾಗಿ ಶ್ರೀ ಶಿವರುದ್ರಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರ ಸೇವೆಯನ್ನು ಪಡೆಯುವ ಬಗ್ಗೆ ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ) ಇವರು ಮೇಲೆ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಮುಂದುವರೆದು, ಶ್ರೀ ಶಿವರುದ್ರಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರು ಜಲ ವಿಜ್ಞಾನ ವಿಷಯದಲ್ಲಿ ಪರಿಣಿತಿ ಹೊಂದಿದ್ದು, ಈ ಹಿಂದೆ ಕೃಷ್ಣಾ ಮತ್ತು ಮಹದಾಯಿ ಜಲ ವಿವಾದ ವಿಷಯಗಳ ಸಲುವಾಗಿ ನವದೆಹಲಿಗೆ ನಿಯೋಜನೆಗೊಂಡು ವಕೀಲರಿಗೆ, ತಾಂತ್ರಿಕ ಪರಿಣಿತರಿಗೆ ಮತ್ತು ಪ್ರಧಾನ ತಾಂತ್ರಿಕ ಸಲಹೆಗಾರರಿಗೆ ನೆರವಾಗಿ ಕಾರ್ಯನಿರ್ವಹಿಸಿರುವುದನ್ನು ಪರಿಗಣಿಸಿ, ಶ್ರೀಯುತರನ್ನು ಮಹದಾಯಿ ಹಾಗೂ ಇತರೆ ಅಂತರ ರಾಜ್ಯ ಜಲ ವಿವಾದಕ್ಕೆ ಉಪ ತಾಂತ್ರಿಕ ಸಲಹೆಗಾರರನ್ನಾಗಿ ಶ್ರೀ ಎಸ್. ಲಕ್ಷ್ಮೀನಾರಾಯಣ ಇವರ ಬದಲಿಗೆ ನೇಮಿಸುವಂತೆ ಮುಖ್ಯ ಇಂಜಿನಿಯರ್‌ರವರು ಶಿಫಾರಸನ್ನು ಸಲ್ಲಿಸಿ, ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

3. ಮಹದಾಯಿ ಜಲ ವಿವಾದದ ವಿಷಯದಲ್ಲಿ ಉಪ ತಾಂತ್ರಿಕ ಸಲಹೆಗಾರುಗಳ ಸೇವೆ ಪಡೆಯುವ ವಿಷಯ ಹಾಗೂ ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

## ಸರ್ಕಾರಿ ಆದೇಶ ಸಂ: ಜಸಂಇ 37 ಮವಿಇ 2018, ಬೆಂಗಳೂರು, ದಿನಾಂಕ:19.01.2019.

ಮಹದಾಯಿ ಜಲ ವಿವಾದ ವಿಷಯದಲ್ಲಿ ಬೆಂಗಳೂರು ಹಾಗೂ ನವದೆಹಲಿಯಲ್ಲಿ ನ್ಯಾಯಾಧಿಕರಣ/ಸರ್ವೋಚ್ಚ ನ್ಯಾಯಾಲಯದಲ್ಲಿನ ಪ್ರಕರಣಗಳ ಕುರಿತು ಕಾನೂನು/ತಾಂತ್ರಿಕ ತಂಡವು ನಡೆಸುವ ಚರ್ಚಾ ಸಭೆಗಳಲ್ಲಿ ಭಾಗವಹಿಸಿ ಅಗತ್ಯ ನೆರವು ನೀಡಲು ಹಾಗೂ ಜಲ ವಿವಾದಕ್ಕೆ ಸಂಬಂಧಿಸಿದ ಇತರೆ ಕರ್ತವ್ಯಗಳನ್ನು ನಿರ್ವಹಿಸುವ ಸಲುವಾಗಿ, ಮುಂದಿನ ಆದೇಶ ಹೊರಡಿಸುವವರೆಗೆ ಈ ಕೆಳಕಂಡವರನ್ನು ಉಪ ತಾಂತ್ರಿಕ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿದೆ:

1. ಶ್ರೀ ಶಿವರುದ್ರಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಬೆಂಗಳೂರು.
2. ಶ್ರೀ ಎನ್.ಮೃತ್ಯುಂಜಯ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಬೆಂಗಳೂರು.

.......2

2. ಸದರಿಯವರುಗಳಿಗೆ ನೀಡಬೇಕಾಗಿರುವ ಸಂಭಾವನೆ ಹಾಗೂ ಇತರೆ ಸೌಲಭ್ಯಗಳ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

19/1/19

(ಎಂ.ಎಸ್.ಮೋಹನ್)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ),
ಜಲ ಸಂಪನ್ಮೂಲ ಇಲಾಖೆ.

ಪ್ರತಿಯನ್ನು :

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ)/(ಇ & ಆರ್.ಎಸ್.ಎ)/(ಎ & ಇ), ಕರ್ನಾಟಕ, ಬೆಂಗಳೂರು.
2. ಮಾನ್ಯ ಜಲ ಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು.
3. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
4. ಮುಖ್ಯ ಇಂಜಿನಿಯರ್ (ಅಂತರ ರಾಜ್ಯ ಜಲ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
5. ಶ್ರೀ ಶಿವರುದ್ರಪ್ಪ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಬೆಂಗಳೂರು.
   {ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಮುಖಾಂತರ}
6. ಶ್ರೀ ಎನ್.ಮೃತ್ಯುಂಜಯ, ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), ಸಂಖ್ಯೆ :98, 4 ನೇ ಮುಖ್ಯ ರಸ್ತೆ, 5 ಎ ಕ್ರಾಸ್, ವಿದ್ಯಾಗಿರಿ ಬಡಾವಣೆ, ನಾಗರಬಾವಿ, ಬೆಂಗಳೂರು-52 {ಮುಖ್ಯ ಇಂಜಿನಿಯರ್ (ಅಂರಾಜ), ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ ಇವರ ಮುಖಾಂತರ}
7. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಉಪ ಕಾರ್ಯದರ್ಶಿ (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
9. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
10. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.